OPENING OF K.F.C.S. WHOLESALE POINT AT CHANNAPATNA

990 (1583A) SRI SADATH ALI KHAN (Channapatna).—Will the Hon'ble Minister for Food and Civil Supplies be pleased to state :-

a) Whether it has come to the notice of the Government that wholesale point of K.F.C.S. is sanctioned to Channapatna Town, if so when it will be opened ?

b) The action taken to avoid accute scarcity of palmolein oil and kerosene oil in Channapatna Town ;

c) Whether there is any proposal to issue Additional Ration Cards to Channapatna Town ; if so, how much time would be taken to complete this ?

SRI M. VEERAPPA MOILY (Minister for Law & Parliamentary Affairs, on behalf of Minister for Food and Civil Supplies).—

a) No such proposals.

b) The distribution of paimolein oil and kerosene depends upon the releases to State Government by Government of India.

c) Ration cards are being issued after verifying the *bonafides* of each applicant and issue of ration card is a continuous process depending upon the receipt of applications.

ಕಳಪೆ ದರ್ಜೆಯ ಅಕ್ಕಿಯನ್ನು ಸರಬರಾಜು ಮಾಡುತ್ತಿರುವುದರ ಬಗ್ಗೆ

೯೯೦ (೧೫೮೩ಬಿ) ಶ್ರೀ ಸಾದತ್ ಆಲಿ ಖಾನ್ (ಚನ್ನಪಟ್ಟಣ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಕರ್ನಾಟಕ ಆಹಾರ ಮತ್ತು ನಾಗರೀಕ ಪೂರೈಕೆ ನಿಗಮದವರು ಗ್ರಾಮಾಂತರ ಪ್ರದೇಶಗಳಿಗೆ ಕಳಪೆ ದರ್ಜೆಯ ಅಕ್ಕಿಯನ್ನು ಸರಬರಾಜು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು ?

ಇ) ಈ ಬಗ್ಗೆ ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಆಹಾರ ಮತ್ತು ನಾಗರೀಕ ಸರಬರಾಜು ಸಚಿವರ ಪರವಾಗಿ).—

ಅ) ಹೌದು. ಸ್ವಲ್ಪ ಮಟ್ಟಿಗೆ.

ಆ) ಕೆಲವು ಸಲ ಭಾರತ ಆಹಾರ ನಿಗಮವು ಇಂತಹ ಅಕ್ಕಿಯನ್ನು ಹಂಚಿಕೆ ಮಾಡಿದ ಕಾರಣದಿಂದಾಗಿ.

ಇ) ಭಾರತ ಆಹಾರ ನಿಗಮದಿಂದ ಪಡೆಯಲಾಗುತ್ತಿರುವ ಅಕ್ಕಿಯನ್ನು ಸತತವಾಗಿ ಪರಿಶೋಧಿಸಿ ಒಳ್ಳೆಯ ಗುಣಮಟ್ಟದ ಅಕ್ಕಿಯನ್ನು ಎತ್ತುವಳಿ ಮಾಡಬೇಕೆಂದು ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಹಾಗೂ ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಈ ಸಲಹೆಗೆ ಭಾರತ ಆಹಾರ ನಿಗಮವು ಒಪ್ಪಿಕೊಂಡಿದೆ.